

## ಕಾರ್ಗತ್ತಲಲ್ಲಿ ಕೆಂಡ ತೂರುವ ಭಕ್ತರು!

ದೇವರಿಗೆ ಪುಷ್ಪಾರ್ಚನೆ ಎಲ್ಲೆಡೆ ಸಾಮಾನ್ಯ ನಡವಳಿಕೆ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಹೊಸಹಟ್ಟಿ ಗ್ರಾಮದ ಬೊಗ್ಗುಲು ಓಬಳೇಶ್ವರ ಜಾತ್ರೆಯಲ್ಲಿ ಭಕ್ತರು ದೇವರ ಹೆಸರಿನಲ್ಲಿ ಕೆಂಡವನ್ನು ತೂರುತ್ತಾರೆ! ಪ್ರತಿ 3 ವರ್ಷಗಳಿಗೊಮ್ಮೆ ನಡೆಯುವ ಈ ಜಾತ್ರೆ ಅತ್ಯಂತ ವಿಶಿಷ್ಟವಾದುದು.

ಉರುಮೆಯ ರುಮುರುಮು ನಾದದಿಂದ ಭಾವಾವೇಶಕ್ಕೆ ಒಳಗಾಗುವ ಭಕ್ತರು ಕೊಂಚವೂ ಬೆಳಕೇ ಇಲ್ಲದ ರಾತ್ರಿಯಲ್ಲಿ ಕೆಂಡವನ್ನು ತೂರುವ ದೃಶ್ಯವನ್ನು ನೋಡುವುದು ಅದ್ಭುತವೇ ಸರಿ. ಬೀಭತ್ಸ ರಸಕ್ಕೆ ಇದನ್ನು ಉದಾಹರಣೆಯನ್ನಾಗಿ ಕೊಡಬಹುದು.

ಬೆಂಕಿಯ ಮಳೆಯೇ ಸುರಿಯುತ್ತಿದೆಯೇನೋ ಎಂದು ಭಾಸವಾಗುವ ರೀತಿ ಜಾತ್ರೆಯಲ್ಲಿ ನಿಗಿ ನಿಗಿ ಕೆಂಡವನ್ನು ಕೈಗೆತ್ತಿಕೊಂಡು ಭಕ್ತರು ತೂರುತ್ತಾರೆ.

ಉಂಟು. ಜಾತ್ರೆಗಾಗಿಯೇ ಊರಿನವರೆಲ್ಲವೂ, ಕೇರಿಯವರೆಲ್ಲರೂ ಸೇರಬೇಕು. ನೆರೆಹೊರೆಯ ಹತ್ತೂರಿನವರೂ ಖುಷಿಯಿಂದ ಬರಬೇಕು.

ಜಾತ್ರೆಯಲ್ಲಿ ಒಂದೊಂದು ಜಾತಿಯ ಜನಕ್ಕೆ ಒಂದೊಂದು ಹೊಣೆಗಾರಿಕೆ. ತೇರು ಕಟ್ಟುವವರು, ಚಕ್ರ ತಯಾರಿಸುವವರು, ಚಕ್ರಕ್ಕೆ ಸನ್ನೆ ಹಾಕುವವರು, ಬಟ್ಟೆ ತೊಡಿಸುವವರು, ಪೂಜಾ ಸಾಮಗ್ರಿ ತಂದು ಪೂಜೆ ಮಾಡುವವರು, ತೇರಿನ ಹಗ್ಗ ಹೊಸೆಯುವವರು., ಹೀಗೆ ಊರಿಗೆ ಊರೇ ಊರ ಹಬ್ಬಕ್ಕೆ ಹೆಗಲು ಕೊಡುತ್ತದೆ.

ಇದು ಮೇಲುನೋಟಕ್ಕೆ ಜಾತಿ ಮೀರುವ ಸೌಹಾರ್ದ–ಸಾಮರಸ್ಯದ ವಾರ್ಷಿಕ ಸಂಭ್ರಮ. ಮಸುಕಾಗದ ಬಾಂಧವ್ಯ. ಇಂಥ ಆಚರಣೆಗಳು ರಾಜ್ಯದ ವಿವಿಧೆಡೆ ಗಮನ ಸೆಳೆಯುತ್ತವೆ. ಹಾಗೇ ಒಳಹೊಕ್ಕು ತಡಕಾಡಿದರೆ ಇದೇ ಜಾತಿ ಪದ್ಧತಿಯ ನಿಜವಾದ ಉಸಿರು ಎಂಬುದೂ ಗೋಚರಿಸುತ್ತದೆ. ಆಯಾ ಜಾತಿಯವರು ಯಾವ ವೃತ್ತಿಯನ್ನು ಮಾಡುವರೋ ಅದಕ್ಕೆ ಸಂಬಂಧಿಸಿದ ಕೆಲಸವನ್ನೇ ವಹಿಸಲಾಗಿರುತ್ತದೆ. ಅವರು ಬೇರೆ ಕೆಲಸ ಮಾಡುವಂತಿಲ್ಲ. ಮಾಡುವುದೂ ಇಲ್ಲ. ಜಾತ್ರೆಗಳಲ್ಲಿ ಹೀಗೆ ಜಾತಿ ಶ್ರೇಣೀಕರಣ ಅನಾಯಾಸವಾಗಿ ಮೂಗು ತೂರಿಸುತ್ತದೆ. ವರ್ಗ ವ್ಯತ್ಯಾಸಗಳೂ ಢಾಳಾಗಿ ಹೊಳೆಯುತ್ತವೆ. ಜಾತ್ರೆಯ ಬಗ್ಗೆ ಹೀಗೆಲ್ಲ ಹೇಳಿದರೆ ತುಸು ಭಾರ ಎನಿಸುವುದೂ ಸಹಜ.

ಇಂಥ ವ್ಯತ್ಯಾಸಗಳ ನಡುವೆಯೂ, ಕೆಲವೆಡೆ ದಲಿತರಿಗೆ ವಿಶೇಷ ಮಹತ್ವವೂ ಪ್ರಾಪ್ತವಾಗುವುದುಂಟು. ಕೊಟ್ಟೂರೇಶ್ವರ ರಥೋತ್ಸವಕ್ಕೆ ಮುನ್ನ ನಡೆಯುವ ಒಂದು ಸಂಪ್ರದಾಯವನ್ನು ಗಮನಿಸಬಹುದು. ಉತ್ಸವಮೂರ್ತಿಯ ಅಡ್ಡಪಲ್ಲಕ್ಕಿ ಮೆರವಣಿಗೆ ರಥವನ್ನು ತಲುಪುವ ಮುನ್ನ, ಉತ್ಸವದ ಸಲುವಾಗಿ 5 ದಿನ ಕಾಲ ಹರಕೆ ಹೊತ್ತು ಉಪವಾಸ ವ್ರತ ಕೈಗೊಳ್ಳುವ ದಲಿತ ಮಹಿಳೆಯರಿಬ್ಬರು ಸಂಪ್ರದಾಯದಂತೆ ಕಳಸದಾರತಿ ಬೆಳಗುತ್ತಾರೆ. ಈ ಆರತಿ ಇಲ್ಲದಿದ್ದರೆ ಅಡ್ಡಪಲ್ಲಕ್ಕಿ ಮುಂದೆ ಹೋಗುವುದಿಲ್ಲ. ಉತ್ಸವ ನಡೆಯುವುದಿಲ್ಲ.

## ನಮ್ಮೂರ ಜಾತ್ರೆಯೇ ದೊಡ್ಡದು!

ಜಾತ್ರೆಗಳು ಮೂಲತಃ ಗ್ರಾಮಭಾರತದ ಕೃಷಿ ಸಂಸ್ಕೃತಿಯ ಸಂಕೇತಗಳು. ಸುಗ್ಗಿ ಕಾಲ ಜಾತ್ರೆಗಳ ಪರ್ವ ಕಾಲ. ವರ್ಷೊಂಬತ್ತು ಕಾಲ ದುಡಿದು ಬೆಳೆದ ಬೆಳೆ ಕಟಾವು ಮಾಡಿದ ನಂತರದ ಬಿಡುವಿನ ನಿರಾಳತೆಯ ಕಾಲ. ಈ ಮಾತನ್ನು ಹಿಂದಿನ ಕೆಲವು ದಶಕಗಳವರೆಗೂ ಹೇಳಬಹುದಿತ್ತು. ಆದರೆ ಈಗ ಕೃಷಿಯ ಮೇಲಿನ ಅವಲಂಬನೆ ಕಡಿಮೆಯಾಗಿ ಗ್ರಾಮಗಳು ನಗರ, ಪಟ್ಟಣಗಳ ಚಹರೆಗಳನ್ನು ಧರಿಸಿವೆ. ನಗರ–ಪಟ್ಟಣಗಳು ಗ್ರಾಮಗಳ ಒಳಹೊಕ್ಕಿವೆ. ಜಾತ್ರೆಗಳು ಈ ಸಂಕರದ ಫಲಗಳಾಗಿಯೇ ಹೊರಹೊಮ್ಮುತ್ತಿದ್ದರೂ ಆಚರಣೆಗಳಲ್ಲಿ ಗಮನಾರ್ಹ ಬದಲಾವಣೆಗಳೇನೂ ಆಗಿಲ್ಲ ಎಂಬುದೇ ವಿಶೇಷ.

'ಮರಕ್ಕಿಂತ ಮರ ದೊಡ್ಡದು' ಎನ್ನುವಂತೆ 'ಜಾತ್ರೆಗಿಂತ ಜಾತ್ರೆ ದೊಡ್ಡದು' ಎಂದು ಧೈರ್ಯವಾಗಿ ಹೇಳಬಹುದು. ಎಲ್ಲರೂ ಒಂದು ಮಾತನ್ನಂತೂ ಹೇಳುತ್ತಲೇ ಇರುತ್ತಾರೆ: ನಮ್ಮೂರಿನ ಜಾತ್ರೆಯೇ ದೊಡ್ಡದು ಸಾರ್! ಅದು ಅಭಿಮಾನದ ವಿಷಯ ನೋಡಿ..

ಹೀಗೆ ಹೇಳಿದ ಮೇಲೂ, ನಿಜಕ್ಕೂ ಹೆಸರಿಗೆ ತಕ್ಕಂತೆ ದೊಡ್ಡ ಜಾತ್ರೆಗಳೂ ಇವೆ ಎಂಬುದನ್ನು ಮರೆಯಬಾರದು. ಅಷ್ಟೇ ಸಾಕೆ? ಬಿಡುವು ಮಾಡಿಕೊಂಡು ಹೋಗಿ ಬರಬೇಕು.

ಒಂದು ತಿಂಗಳ ಕಾಲ ನಡೆಯುವ ಬಾಗಲಕೋಟೆ ಜಿಲ್ಲೆಯ ಬದಾಮಿಯ ಬನಶಂಕರಿ ಜಾತ್ರೆ, 15 ದಿನ ನಡೆಯುವ ಕೊಪ್ಪಳದ ಗವಿಸಿದ್ದೇಶ್ವರ ಜಾತ್ರೆ, ಪಂಚಮಹಾರಥಗಳ ನಂಜನಗೂಡು ಜಾತ್ರೆ, ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರಿನಲ್ಲಿ 9 ದಿನ ನಡೆಯುವ ಕಂಪಳ ದೇವರ ಜಾತ್ರೆ, ಕಲಬುರ್ಗಿಯಲ್ಲಿ 15 ದಿನ ನಡೆಯುವ ಶ್ರೀ ಶರಣ ಬಸವೇಶ್ವರ ಜಾತ್ರೆ, ಗಂಗಾವತಿ ತಾಲ್ಲೂಕಿನ ಕನಕಗಿರಿ ಜಾತ್ರೆ, 6 ದಿನಗಳ ಸುತ್ತೂರು ಜಾತ್ರೆ. ಹೀಗೆ ದೊಡ್ಡ ಜಾತ್ರೆಗಳ ಪಟ್ಟಿಯೂ ದೊಡ್ಡದು. ಅವುಗಳ ನಡುವೆ ಸಣ್ಣ ಜಾತ್ರೆಗಳು ಮಾತ್ರ ಸಾವಿರಾರು. ಅಂದಹಾಗೆ, ಸಣ್ಣದು ಸುಂದರ ಎಂಬುದನ್ನು ಒಪ್ಪಲೇಬೇಕು.

ಈ ಬಾರಿ ಕೊಪ್ಪಳದ ಗವಿಸಿದ್ದೇಶ್ವರ ಜಾತ್ರೆ ಜ.12ರಂದು ನಡೆಯಲಿರುವುದರಿಂದ, ಹಂಪಿ ಉತ್ಸವವನ್ನು ಮೊದಲೇ ನಿಗದಿಯಾದಂತೆ ಜ.11,12ರಂದು ನಡೆಸುವ ಬದಲು 10, 11ಕ್ಕೆ ನಿಗದಿ ಮಾಡಲಾಯಿತು. ಜನ ಇಲ್ಲಿ ಹಂಪಿ ಉತ್ಸವಕ್ಕೂ ಬರಬೇಕು. ಪಕ್ಕದ ಜಾತ್ರೆಗೂ ಹೋಗಬೇಕು. ಅಲ್ಲವೇ.

## ಏಕಾಂತದ ಭಕ್ತಿ, ಲೋಕಾಂತದ ಜಾತ್ರೆ...

ಜನಜಾತ್ರೆ ಎನ್ನುವುದು ಕ್ಲೀಷೆ. ಜಾತ್ರೆಯಲ್ಲಿ ನೆರೆವವರು ಅಪ್ಪಟ ಭಕ್ತರು. ಅದು ಭಕ್ತರ ಜಾತ್ರೆ. ಆದರೆ ಭಕ್ತರಲ್ಲದವರಿಗೂ ಜಾತ್ರೆಯಲ್ಲಿ ಪಾಲ್ಗೊಳ್ಳಲು ಮುಜುಗರವೇನೂ ಇರುವುದಿಲ್ಲ.